
ಸರ್ವಜ್ಞನ ತ್ರಿಪದಿಗಳು ಆಧುನಿಕ ಬದುಕಿಗೂ ಪ್ರಸ್ತುತವಾಗಿವೆ. ಏಕೆಂದರೆ ಸರ್ವಜ್ಞನು ಹೇಳಿರುವ ಸಮಾಜ, ಸ್ತ್ರೀ, ವಿಜ್ಞಾನ, ಪ್ರಕೃತಿ, ಆರೋಗ್ಯ, ಆಹಾರ, ಗುರು-ಶಿಷ್ಯರ ಸಂಬಂಧ, ದಾನ, ಧಾರ್ಮಿಕ ವಿಚಾರಗಳು ಇಂದಿನ ಆಧುನಿಕ ಸಮಾಜಕ್ಕೆಅತ್ಯಗತ್ಯವಾಗಿವೆ. ಸರ್ವಜ್ಞನುಜಾತಿ-ಧರ್ಮವನ್ನು ಮೀರಿ ಬೆಳೆದ ಶ್ರೇಷ್ಠ ಚಿಂತಕ. ಪುಷ್ಪದತ್ತನೆಂಬ ಹೆಸರಿನಿಂದ ಹುಟ್ಟಿದ ಈತನು ತನ್ನ ಅಪಾರವಾದ ವಿಶಿಷ್ಟ ಜ್ಞಾನದಿಂದ ಸರ್ವಜ್ಞನಾದ. ಈಗ ಸರ್ವಜ್ಞ ಎಂದರೆ ತ್ರಿಕಾಲ ಜ್ಞಾನಿ, ಸಂತ, ಎಲ್ಲವನ್ನು ತಿಳಿದವನು ಎಂಬ ಅರ್ಥ ಬಂದಿದೆ.

ನಮ್ಮ ಸರ್ವಜ್ಞ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಜಯರಾಮಯ್ಯ ವಿ. ಮತ್ತು ಅವರ ಸಹೋದ್ಯೋಗಿಗಳು ದಾರ್ಶನಿಕ ಕಾವ್ಯಗಳು : ಸರ್ವಜ್ಞನ ತ್ರಿಪದಿಗಳು ಎಂಬ ಅಮೂಲ್ಯ ಕೃತಿಯನ್ನು ಸಂಪಾದಿಸಿದ್ದಾರೆ. ಇವರಿಗೆ ತುಂಬು ಹೃದಯದ ಅಭಿನಂದನೆಗಳು.

ಪ್ರೊ. ಬಿ.ಡಿ. ಕುಂಬಾರ
ಕುಲಪತಿಗಳು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ

ISBN 978-93-92051-98-2
ಉಷಾ ಪ್ರಕಾಶನ
ಮೈಸೂರು

ದಾರ್ಶನಿಕ ಕಾವ್ಯಗಳು : ಸರ್ವಜ್ಞನ ತ್ರಿಪದಿಗಳು
ಸಂ: ಡಾ. ಜಯರಾಮಯ್ಯ ವಿ.



# ದಾರ್ಶನಿಕ ಕಾವ್ಯಗಳು: ಸರ್ವಜ್ಞನ ತ್ರಿಪದಿಗಳು

ಸಂಪಾದಕರು
ಡಾ. ಜಯರಾಮಯ್ಯ ವಿ.

ಸಹ ಸಂಪಾದಕರು
ಡಾ. ಶಿವಣ್ಣ ಜಿ.ಬಿ.
ಡಾ. ಅಮಿತ ಎಂ. ಕುಡಚೆ
ಡಾ. ಹನುಮಂತಪ್ಪ ಸಿ.ಬಿ.
ಡಾ. ರುಜುವಾನ್ ಕೆ.

# ದಾರ್ಶನಿಕ ಕಾವ್ಯಗಳು:
# ಸರ್ವಜ್ಞನ ತ್ರಿಪದಿಗಳು


ಸಂಪಾದಕರು :

**ಡಾ. ಜಯರಾಮಯ್ಯ ವಿ.**

ಸಹ ಸಂಪಾದಕರು :

**ಡಾ. ಶಿವಣ್ಣ ಜಿ.ಬಿ.**
**ಡಾ. ಅಮಿತ ಎಂ. ಕುಡಚೆ**
**ಡಾ. ಹನುಮಂತಪ್ಪ ಸಿ.ಬಿ.**
**ಡಾ. ರುಜುವಾನ್ ಕೆ.**



**ಉಷಾ ಪ್ರಕಾಶನ**
# 2542, ಹೆಬ್ಬಾಳ್ 2ನೇ ಹಂತ
ರೇಣುಕ ಎಲ್ಲಮ್ಮ ದೇವಸ್ಥಾನದ ಹತ್ತಿರ
ಮೈಸೂರು–17


## Darshanika Kavyagalu :
## Sarvagnana Tripadigalu


**Edited By :**
**Dr. Jayaramaiah V.**
Associate Professor and Chairperson
Department of Kannada Studies and Research Center
Davanagere University, Shivagangotri, Davanagere-577007.

**Co-Edited By :**
**Dr. Shivanna G.B., Dr. Amit M. Kudache**
**Dr. Hanumanthappa C.B., Dr. Rujuvan K.**



**Published by :**
**Usha Prakashana**
# 2542, Hebbal 2nd Stage
Near Renuka Yellamma Temple, Mysore-17

**ISBN : 978-93-92051-98-2**
Pages : x + 214 + 4 =228
First Impression : 2025


© : Author


Copies : 1000
Price : Rs.285-00
Paper Used : Maplitho 68GSM
Book Size : 1/8 Demmy

ಪುಟಗಳು : x + ೨೧೪ + ೪ = ೨೨೮
ಮೊದಲ ಮುದ್ರಣ : ೨೦೨೫
ಪ್ರತಿಗಳು : ೧೦೦೦


© : ಲೇಖಕರದು


ಬೆಲೆ : ರೂ.೨೮೫–೦೦
ಮುಖಪುಟ ವಿನ್ಯಾಸ : ಸಿ.ಜೆ.ಆರ್ಟ್ಸ್, ಮೈಸೂರು
ಅಕ್ಷರ ಜೋಡಣೆ : ಉನ್ನತಿ ಗ್ರಾಫಿಕ್ಸ್, ಮೈಸೂರು
ಮುದ್ರಣ : ಪ್ರಿಂಟ್ ಕಲ್ಚರ್, ಮೈಸೂರು

## ಪರಿವಿಡಿ


* ಸರ್ವಜ್ಞನ ವಚನಗಳಲ್ಲಿ ಸಾಮಾಜಿಕ ಸುಧಾರಣೆ – ಉಮಾ 1
* ಸರ್ವಜ್ಞನ ವಚನಗಳಲ್ಲಿ ಗುರುವಿನ ಮಹತ್ವ – ವೀಣಾ ಪ್ರಸಾದ್ ಕಜೆ 8
* ಸರ್ವಜ್ಞನ ವಚನದಲ್ಲಿ ಸ್ತ್ರೀ – ಹಳೇಕೋಟೆ ಸತ್ಯಪ್ಪ 14
* ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿನ ಮಹತ್ವ – ಅರುಣ ಎಸ್. 22
* ಸರ್ವಜ್ಞನ ತ್ರಿಪದಿಗಳಲ್ಲಿ ಆಧುನಿಕ ವ್ಯಕ್ತಿ ಮತ್ತು ವ್ಯಕ್ತಿತ್ವ– ಹನುಮಂತಪ್ಪ ಸಿ.ಬಿ. 27
* ಜ್ಞಾನದ ಜ್ಯೋತಿಯಾಗಿ ಸರ್ವಜ್ಞ – ತಿಪ್ಪೇಸ್ವಾಮಿ ಎಂ.ಆರ್. 37
* ಸರ್ವಜ್ಞನ ವಚನಗಳಲ್ಲಿರುವ ವೈಚಾರಿಕ ಪ್ರಜ್ಞೆ– ಡಾ. ಎಂ.ಕೆ. ಮಂಜುನಾಥ್ 43
* ಸರ್ವಜ್ಞನ ತ್ರಿಪದಿಗಳಲ್ಲಿ ವಿಡಂಬನೆ – ಶಿವರಾಜ ಶಾಮರಾವ 53
* ಸರ್ವಜ್ಞನ ವಚನಗಳಲ್ಲಿ ದಾನದ ಮಹತ್ವ – ಲಕ್ಷ್ಮಿದೇವಿ ಎನ್. 60
* ಸರ್ವಜ್ಞನ ತ್ರಿಪದಿಗಳಲ್ಲಿ ಜೀವನ ಮೌಲ್ಯಗಳು– ಡಾ. ರವಿಕುಮಾರ ಕೆ.ಎಂ. 66
* ಸರ್ವಜ್ಞನ ತ್ರಿಪದಿಗಳಲ್ಲಿ ರಾಜತ್ವ – ಡಾ. ಪ್ರಭಾಕರ ಹೆಚ್.ಎನ್. 75
* ಸರ್ವಜ್ಞನ ತ್ರಿಪದಿಗಳಲ್ಲಿ 'ಗುರು' – ಡಾ. ಹನುಮಂತಪ್ಪ ಸಂಜೀವಣ್ಣನವರ 83
* ಸರ್ವಜ್ಞನನ ತ್ರಿಪದಿಗಳಲ್ಲಿ– ಜೀವನ ಮೌಲ್ಯಗಳು– ಡಾ. ಮಂಜುಳಾಕ್ಷಿ ಎಲ್. 88
* ಸರ್ವಜ್ಞ: ಅನಾಮಧೇಯ ತ್ರಿಪದಿಗಳ ರೂಪಕ
  – ಡಾ. ಪ್ರವೀಣಕುಮಾರ್ ಎಸ್. 98
* ಸರ್ವಜ್ಞನ ತ್ರಿಪದಿಗಳಲ್ಲಿ ವೈಚಾರಿಕ ಮತ್ತು ವೈಜ್ಞಾನಿಕ ಅಂಶಗಳು
  – ರಾಮರೆಡ್ಡಿ ಕೆ. 105
* ಮಹಾಚೇತನ ಸರ್ವಜ್ಞ – ಶ್ರೀಮತಿ ಸುನಂದ ಎಸ್. ಕೋರಿ 110
* ಸರ್ವಜ್ಞನ ತ್ರಿಪದಿಗಳಲ್ಲಿ ಆರ್ಥಿಕತೆಯ ವಿಚಾರಗಳು
  – ಡಾ. ರಾಜಶೇಖರ ಬಿರಾದಾರ 120
* ಸರ್ವಜ್ಞನ ವಚನಗಳಲ್ಲಿ ರಾಜಧರ್ಮ – ಡಾ. ಶ್ರೀಕೃಷ್ಣ ಸುಣ್ಣಂಗುಳಿ 126
* ಸರ್ವಜ್ಞನ ವಚನಗಳಲ್ಲಿ ಗುರು–ಶಿಷ್ಯ ಸಂಬಂಧ – ಶ್ರೀ ರಘುಪ್ರಸಾದ ಟಿ. 132
* ಸರ್ವಜ್ಞನ ವಚನಗಳಲ್ಲಿ ಜಾತಿಯ ಪರಿಕಲ್ಪನೆ – ಗೀತಾ ಹೆಚ್. 139
* ಸರ್ವಜ್ಞನ ತ್ರಿಪದಿಗಳಲ್ಲಿ ವೇಶ್ಯಾ ಸ್ತ್ರೀ ಪರಿಕಲ್ಪನೆ ಡಾ.ಸುಜಾತಾ ಚಲವಾದಿ 145
* ಸರ್ವಜ್ಞನ ತ್ರಿಪದಿಗಳಲ್ಲಿ ಗುರುವಿನ ಮಹತ್ವ – ಸಾವಿತ್ರಿ ಸಿ. 151
* ಸರ್ವಜ್ಞನ ತ್ರಿಪದಿಗಳಲ್ಲಿ – 'ಲೋಕಾಯತ' – ಗದ್ದೆಪ್ಪ ಎಸ್. ಗೌಂಡಿ 159





* ಸರ್ವಜ್ಞನ ವಚನಗಳಲ್ಲಿ ವಿಧಿ ವಿಲಾಪ – ರುಜುವಾನ್ ಕೆ. 165
* ಪ್ರಸ್ತುತ ಬದುಕಿಗೆ ಸರ್ವಜ್ಞನ ತ್ರಿಪದಿಗಳು – ಅಮಿತ ಎಂ. ಕುಡಚಿ 170
* ಸರ್ವಜ್ಞನ ವಚನಗಳಲ್ಲಿ ಗುರು – ಹರೀಶ್ ಕೆ.ಜೆ. 174
* ಸರ್ವಜ್ಞನು, ಸಿದ್ದನೋ? ಬುದ್ಧನೋ? ಅಥವಾ ಇತರೆ ಧರ್ಮಿಯನೋ?
  – ಮೋಹನ್ ಪ್ರಸಾದ್ ಎಸ್. 181
* ಸರ್ವಜ್ಞನ ವಚನಗಳಲ್ಲಿ – ಜಾತಿಯ ಪರಿಕಲ್ಪನೆ
  – ಡಾ. ಶಿವಾನಂದ ಎಂ. ಹಂಚಿನಾಳ 187
* ಸರ್ವಜ್ಞನ ವಚನಗಳಲ್ಲಿ ಅರಸ–ಮಂತ್ರಿ – ಡಾ. ವೀರಪ್ಪ ಪೂಜಾರ 192
* ಸರ್ವಜ್ಞನ ವಚನಗಳಲ್ಲಿ ಹೂವಿನ ಚಿತ್ರಣ – ಅಶ್ವಿನಿ ಬಿ.ಆರ್. 198
* ಸರ್ವಜ್ಞನ ವಚನಗಳಲ್ಲಿ ಗುರು ಪ್ರಜ್ಞೆ – ಡಾ. ಶಿವಣ್ಣ ಬಿ.ಜಿ. 203
* ಲೇಖಕರ ವಿಳಾಸ 210


* * *

# ಸರ್ವಜ್ಞನ ವಚನಗಳಲ್ಲಿರುವ ವೈಚಾರಿಕ ಪ್ರಜ್ಞೆ

– ಡಾ. ಎಂ.ಕೆ. ಮಂಜುನಾಥ್,

ಕನ್ನಡ ನಾಡು ಕಂಡ ಶ್ರೇಷ್ಠ ದಾರ್ಶನಿಕ, ವೈಚಾರಿಕ ತ್ರಿಪದಿಗಳ ಚಕ್ರವರ್ತಿ ಎಂದು ಪ್ರಸಿದ್ಧಿ ಪಡೆದಿರುವ ಸಂತ ಸರ್ವಜ್ಞ, ವಚನಕಾರರಂತೆ ಸಮಾನತೆಯ ನವಸಮಾಜವನ್ನು ನಿರ್ಮಿಸುವ ಕನಸು ಕಂಡ ಸಮಾಜಸುಧಾರಕ ಸರ್ವಜ್ಞ, ತ್ರಿಪದಿಗಳ ಮೂಲಕ ಕನ್ನಡದ ಅಸ್ಮಿತೆಯನ್ನು ಅರ್ಥಮಾಡಿಸಿದ ಅಸಾಮಾನ್ಯ ವಚನಕಾರ ಸರ್ವಜ್ಞ, ಜಾತಿ, ಮತ, ಧರ್ಮ ಸಂಘರ್ಷದ ವಿರುದ್ಧ ದನಿ ಎತ್ತಿದ, ಮೂಢನಂಬಿಕೆ, ಶೋಷಣೆಗಳನ್ನು ಕಟುವಾಗಿ ಟೀಕಿಸಿದ, ವಿಶ್ವ ಮಾನವತೆ, ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಸರ್ವಜ್ಞನ ತ್ರಿಪದಿಗಳು ಸಮಾಜಕ್ಕೆ ಸಾರ್ವಕಾಲಿಕ ದಿವ್ಯೌಷಧಗಳಾಗಿವೆ. ಸರ್ವಜ್ಞ ಕವಿಯು ನಾಲ್ಕು ಗೋಡೆಗಳ ಮಧ್ಯೆ ಕಲಿಯುವ ಪಾರಂಪರಿಕವಾದ, ಸಾಂಪ್ರದಾಯಿಕ ಶಿಷ್ಟ ಶಿಕ್ಷಣವನ್ನು ಪಡೆಯದೆ, ಜನಸಾಮಾನ್ಯರ ನಡುವೆ ತಿರುಗಾಡಿದ್ದುಕೊಂಡು ಮಹಾಜ್ಞಾನ ಪರ್ವತವಾಗಿರುವ ತ್ರಿಪದಿಗಳ ಮೂಲಕ ಬದುಕಿನ ಅನುಭಾವದ ಮಹಾಭಾಷ್ಯ ಬರೆದಿರುವುದು ಒಂದು ವಿಶೇಷವಾದ ಸಂಗತಿಯಾಗಿದೆ.

ಸರ್ವಜ್ಞ ಕವಿಯು ಸರಳ ನಿರೂಪಣೆ, ಜಾನಪದ ಸೊಗಡಿನ ಮೂರು ಸಾಲಿನ ವಚನಗಳಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಿದ್ದಾರೆ. ಜನಸಾಮಾನ್ಯರಿಗೆ ಅರಿಯುವಂತಹ ಸರಳವಾದ ಪದಗಳನ್ನು, ಕನ್ನಡದ ಪಾರಂಪರಿಕ ಜನಪದ ಆಡುಮಾತಿನ ಪದಗಳೊಂದಿಗೆ ಜೋಡಿಸಿ ತ್ರಿಪದಿಗಳನ್ನು ರಚಿಸಿ ಅವುಗಳ ಮೂಲಕ ಸಮಾಜದಲ್ಲಿರುವ ಅನೇಕ ಅಂಕು–ಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ. ಸರ್ವಜ್ಞ ವಚನಗಳು ಡಂಭಾಚಾರ, ಮೂಢನಂಬಿಕೆ, ಶೋಷಣೆ ಮುಂತಾದವುಗಳನ್ನು



ಕಟುವಾಗಿ ಟೀಕಿಸಿ ಅವುಗಳಿಂದ ಮುಕ್ತವಾದ ಸಮಸಮಾಜವನ್ನು ನಿರ್ಮಾಣ ಮಾಡುವ ಉದ್ದೇಶವನ್ನು ಪ್ರತಿಪಾದಿಸುತ್ತವೆ.

ಸರ್ವಜ್ಞ ಕವಿಯು ವೈಚಾರಿಕ ನಿಲುವು, ಸಾಮಾಜಿಕ ಪ್ರಜ್ಞೆ ಅರ್ಥಪೂರ್ಣವಾಗಿದೆ. ಈ ಸಮಾಜದ ಸಮಾನತೆಗಾಗಿ ಮಿಡಿದು ನೇರ, ದಿಟ್ಟ, ಪ್ರಾಮಾಣಿಕತೆ, ವೈಚಾರಿಕತೆಯ ದೃಷ್ಟಿಕೋನದಲ್ಲಿ ರಚಿಸಿರುವ ಸಾವಿರಾರು ತ್ರಿಪದಿಗಳು ಸರ್ವಕಾಲಕ್ಕೂ ಸತ್ಯ ಎನಿಸುತ್ತವೆ. ಮಹಾಜ್ಞಾನಿ ಸರ್ವಜ್ಞನ ಅನುಭಾವ ಮತ್ತು ವಿವೇಕವು ಪ್ರತಿಯೊಬ್ಬರ ಹೃದಯದಲ್ಲಿ ಮಿನುಗುವ ಸ್ಫೂರ್ತಿಯ ಚಿಲುಮೆಯಾಗಿವೆ. ಸರ್ವಜ್ಞನ ಮಾತುಗಳು ಸಾಮಾನ್ಯ ಜನರ ವೇದಗಳಾಗಿದ್ದು, ಕನ್ನಡದ ಗಾದೆಗಳಂತೆ ಜೀವಂತವಾಗಿವೆ ಎನ್ನಬಹುದು.

ವಿರಾಗಿಯಾಗಿ ದೇಶ ಸಂಚಾರ ಮಾಡಿ ಅನುಭವದ ಜೀವನ ಪಾಠವನ್ನು ಕಲಿತು ಮಹಾಜ್ಞಾನಿ ಅಂದರೆ ಸರ್ವಜ್ಞನಾದವನು. ತನ್ನ ಬಗ್ಗೆ ವಚನವೊಂದರಲ್ಲಿ ಹೇಳುವಂತೆ,

**'ಸರ್ವಜ್ಞನೆಂಬುವನು ಗರ್ವದಿಂದಾದವನೇ?**
**ಸರ್ವರೊಳು ಒಂದೊಂದು ನುಡಿಗಲಿತು**
**ವಿದ್ಯೆಯ ಪರ್ವತವೆ ಆದ ಸರ್ವಜ್ಞ'**

ಎಂದು ತಾನು ಹೇಗೆ ಹೆಚ್ಚಿನ ಜ್ಞಾನವನ್ನು ಪಡೆದು ಸರ್ವಜ್ಞನಾದೆ ಎಂಬ ವಿಚಾರವನ್ನು ತಿಳಿಸುತ್ತಾರೆ. ಈ ಸಮಾಜದ ಜಾತಿ ವ್ಯವಸ್ಥೆ, ಅಂಧಶ್ರದ್ಧೆ, ಕಂದಾಚಾರ, ದಬ್ಬಾಳಿಕೆ, ಶೋಷಣೆ, ಮೌಢ್ಯತೆಗಳೆಂಬ ಅನಿಷ್ಟತೆ ಪದ್ಧತಿಯನ್ನು ಧಿಕ್ಕರಿಸಿ ಸಮಸಮಾಜದ ಪರಿಕಲ್ಪನೆಯನ್ನು ಮುನ್ನೆಲೆಗೆ ತರುವ ಪ್ರಯತ್ನವನ್ನು ಸರ್ವಜ್ಞ ಕವಿಯು ಮಾಡಿದರು.

ಬಸವಾದಿ ಶರಣರು ತಮ್ಮ ವಚನಗಳ ಮೂಲಕ ಸಮಾನತೆ ಸಮಾಜವನ್ನು ನಿರ್ಮಿಸಲು ಬಯಸಿದಂತೆ, ಅದೇ ತತ್ವಾಧಾರಿತ ಚಿಂತನೆ ಮತ್ತು ಸೂಕ್ಷ್ಮ ಪ್ರಜ್ಞಾವಂತಿಕೆಯಿಂದ ಸಂತ ಸರ್ವಜ್ಞನೂ ಕೂಡ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸಿರುವುದನ್ನು ಕಾಣಬಹುದು. ವಿಶ್ವ ಮಾನವತೆ, ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ವೈಚಾರಿಕ ದೃಷ್ಟಿಕೋನದಿಂದ ಚಿತ್ರಿಸಿರುವ ವಿಚಾರವನ್ನು ಸರ್ವಜ್ಞನ ತ್ರಿಪದಿಗಳಲ್ಲಿ ಕಾಣಬಹುದು. ಅವುಗಳಲ್ಲಿ ಕೆಲ ಉದಾಹರಣೆಗಳನ್ನು ನೋಡೋಣ.

**ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು,**
**ಸುಡುವಗ್ನಿಯೊಂದೇ ಇರುತಿರೆ ಕುಲಗೋತ್ರ**
**ನಡುವೆ ಎತ್ತಣದು ಸರ್ವಜ್ಞ**

ಅಸ್ಪೃಶ್ಯತೆಯ ಮೂಲವೆಲ್ಲಿ? ಎಲ್ಲರಿಗೂ ಇರುವುದು ಒಂದೇ ಭೂಮಿ, ಎಲ್ಲರೂ ದಾಹವಾದಾಗ ನೀರನ್ನೇ ಕುಡಿಯುತ್ತಾರೆ, ಅಗ್ನಿಸಂಸ್ಕಾರಕ್ಕೆ ಬೆಂಕಿಯನ್ನೇ ಬಳಸುತ್ತಾರೆ. ಹೀಗಿರುವಾಗ ಅಸ್ಪೃಶ್ಯತೆ ಎಲ್ಲಿಂದ ಬಂತು. ವ್ರತ, ನೇಮದಲ್ಲಿದ್ದೇವೆ – ಮುಟ್ಟಿಸಿಕೊಳ್ಳುವುದಿಲ್ಲ ಎಂದೋ, ಅಥವಾ ಬೇರೆ ಜಾತಿಯವರನ್ನು ಮುಟ್ಟಿಸಿಕೊಳ್ಳುವುದಿಲ್ಲ ಎಂದು ಹೇಳಲು ಹೇಗೆ ಸಾಧ್ಯ? ಸರ್ವಜ್ಞನ ಈ ಪ್ರಶ್ನೆಗೆ ಉತ್ತರ ಸಿಗುವುದು ಕಷ್ಟ.

**ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ**
**ಜಾತಿ ವಿಜಾತಿಯೆನಬೇಡ ದೇವನೊಲಿ**
**ದಾತನೇ ಜಾತ ಸರ್ವಜ್ಞ**

ಸರ್ವಜ್ಞನು ಸಮಸಮಾಜ ನಿರ್ಮಾಣದಲ್ಲಿ ಬಹುದೊಡ್ಡ ದಿಟ್ಟ ಹೆಜ್ಜೆಯನ್ನು ಇಟ್ಟು, ಯಾವುದಕ್ಕೂ ಅಂಜದೆ, ಅಳುಕದೆ ನೇರವಾಗಿ ಕಟು ಸತ್ಯವನ್ನು ಬಿಚ್ಚಿಟ್ಟಿರುವುದನ್ನು ಕಾಣಬಹುದು. ಜಾತಿಯ ವಿಚಾರಕ್ಕೆ ಬಂದರೆ ಸರ್ವಜ್ಞನಲ್ಲಿ ಬೆಂಕಿಯ ಉಂಡೆಯಂತೆ ಪ್ರತಿಭಟಿಸುವ ಮನೋಭಾವವಿದೆ. ಕೇವಲ ಯಾಂತ್ರಿಕವಾಗಿ ದೇವಸ್ಥಾನಕ್ಕೆ ಹೋಗಿ, ವಿವೇಕವಿಲ್ಲದೆ ಮೂರ್ತಿ ಪೂಜೆ ಮಾಡಿ ಅಷ್ಟರಿಂದಲೇ ಧನ್ಯರಾದೆವೆಂದು ಭಾವಿಸುವ ಜನರನ್ನು ಕುರಿತು ಸರ್ವಜ್ಞ ಹೀಗೆ ವರ್ಣಿಸಿರುವುದನ್ನು ಕಾಣಬಹುದು.

**ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ**
**ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಿಲ್ಲ**
**ದಿಲ್ಲಕಾಣಯ್ಯ! ಸರ್ವಜ್ಞ**

ಅಂತರಂಗದಲ್ಲಿ ಭಕ್ತಿಯಿಲ್ಲದೆ ಕೇವಲ ಪ್ರದರ್ಶನಕ್ಕಾಗಿ ಆಡಂಬರದ ಪೂಜೆ ಮಾಡುವವರನ್ನು ಕಂಡು ಸರ್ವಜ್ಞನು ಟೀಕಿಸಿರುವುದನ್ನು ಕಾಣಬಹುದು. ಬಸವಣ್ಣನವರು 'ಉಂಬ ಜಂಗಮ ಬಂದರೆ ನಡೆಯೆಂಬರು : ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ'ಎಂದು ಸಾರಿದಂತೆ ಸರ್ವಜ್ಞನೂ ವಚನವೊಂದರಲ್ಲಿ,

**ಉಣಬಂದ ಜಂಗಮಕೆ ಉಣಬಡಿಸಲೊಲ್ಲದೇ**
**ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ**
**ಬಣಗುಗಳ ನೋಡ! ಸರ್ವಜ್ಞ**

ಮನುಷ್ಯನ ಮೂಢನಂಬಿಕೆಗಳಿಗೆ ಯಾವುದೇ ಇತಿಮಿತಿ ಇಲ್ಲ ಎಂದೆನಿಸುತ್ತದೆ. ಯಾಕೆಂದರೆ, ತಮ್ಮ ಮನೆಯ ಬಾಗಿಲಿಗೆ ಭಿಕ್ಷೆ ಬೇಡಿ ಬರುವ ಸಂತರಿಗೆ, ಭಿಕ್ಷುಕರಿಗೆ ಊಟವನ್ನು ನೀಡಲು ಜನ ಯೋಚಿಸುತ್ತಾರೆ. ಆದರೆ, ಜೀವವಿಲ್ಲದ, ಮಾತನಾಡದ, ಊಟ ನೀಡೆಂದು ಕೇಳದ ಕಲ್ಲಿನ ದೇವರಿಗೆ ಬಗೆಬಗೆಯ ಅಡುಗೆಯನ್ನು ಮಾಡಿ,



ಭಕ್ತಿಯಿಂದ ನಮಸ್ಕರಿಸುತ್ತಾ ನೈವೇದ್ಯ ಮಾಡುತ್ತಾರೆ. ಇಂತಹ ಮೂಢನಂಬಿಕೆಗೆ ಏನು ಹೇಳಬೇಕೋ ತಿಳಿಯುವುದಿಲ್ಲ. ಚಿತ್ತೈಕಾಗ್ರತೆಯೂ ಚಿತ್ತಶುದ್ಧಿಯೂ ಇಲ್ಲದ ನಿರರ್ಥಕವಾದ ಬಾಹ್ಯಾಚಾರಗಳಿಂದ ಎಳ್ಳಷ್ಟು ಪ್ರಯೋಜನವಿಲ್ಲ ಎಂದಿದ್ದಾರೆ.

**ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು**
**ಎತ್ತು ಗಾಣವನು ಹೊತ್ತು ತಾ ನಿತ್ಯದಿ**
**ಸುತ್ತಿ ಬಂದಂತೆ! ಸರ್ವಜ್ಞ**

ಬರೀ ತೋರಿಕೆಯ, ಆಡಂಬರದ ಪೂಜೆ ಸಲ್ಲದು. ಭಕ್ತಿ, ಶ್ರದ್ಧೆ, ನಿಷ್ಠೆ, ಏಕಾಗ್ರತೆ, ದೃಢತೆ, ಚಿತ್ತಶುದ್ಧಿಯಲಿ ಭಜಿಸದ, ಬಾಹ್ಯಾಚಾರಗಳಿಂದೇನು ಪ್ರಯೋಜನ, ಇವೆಲ್ಲವೂ ವ್ಯರ್ಥ ಎಂಬ ಪ್ರಜ್ಞೆ ಮೂಡಿಸುವ ಪ್ರಯತ್ನ ಮಾಡುತ್ತಾರೆ. ಮತ್ತೊಂದು ವಚನದಲ್ಲಿಯೂ ಇದೇ ಪ್ರಸ್ತಾಪವಿದೆ.

**ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು?**
**ಮನದಲ್ಲಿ ನೆನೆಯದಿರುವನು ದೇಗುಲದ**
**ಕೊನೆಯಲಿದ್ದೇನು? ಸರ್ವಜ್ಞ**

ಅಂತಮುರ್ಖಿಯಾಗಿ ಮಾನಸ ಪೂಜೆ ಮಾಡುವವನು ಮನೆಯಲ್ಲಿಯೇ ಇದ್ದು, ಮಠವಾಸಿಗಳಿಗಿಂತ ಹೆಚ್ಚಿನ ಫಲವನ್ನು ಪಡೆಯಬಹುದು. ಹಾಗಿಲ್ಲದವನು ದೇವಾಲಯದಲ್ಲಿದ್ದರೂ ಪ್ರಯೋಜನವೇನು? ಸರ್ವಜ್ಞ ಮಾಡಿಕೊಂಡ ಪರಮಾತ್ಮನ ಕಲ್ಪನೆಯು ವಿಶಾಲವಾದುದೂ, ಮತಾತೀತವಾದದೂ ಆಗಿದೆ.ಆಡಂಬರದ ಪೂಜೆ ವ್ಯರ್ಥವೆಂದ ಮನೋಧೋರಣೆಯನ್ನು ಇಲ್ಲಿ ಕಾಣಬಹುದು.

ದೇಹಕ್ಕೆ ಕುಲವಿದೆಯೇ? ಎಂಬ ಪ್ರಶ್ನೆ ಮಾಡುತ್ತಾ, 'ಕುಲ ಕುಲ ಎಂದು ಹೊಡೆದಾಡದಿರಿ' ಎಂದು ಕನಕದಾಸರು ಹೇಳಿದಂತೆಯೇ, ದೇಹದ ರಚನೆ ಎಲ್ಲಾ ಕುಲದವರಿಗೂ ಒಂದೇ, ದೇಹದ ಅಗತ್ಯಗಳೂ (ಊಟ, ವಿಶ್ರಾಂತಿ) ಸಹ ಒಂದೇ. ಹಾಗಿರುವಾಗ ದೇಹಕ್ಕೆ ಯಾವ ಕುಲವಿರಲು ಸಾಧ್ಯ? ದೇಹಕ್ಕಿಲ್ಲದ ಕುಲ ವ್ಯಕ್ತಿಗೇಕೆ? ಎಂದು ಎಲ್ಲರನ್ನು ಎಚ್ಚರಿಸುವ ಮಾತು ವಚನಗಳಲ್ಲಿದೆ.

**'ಎಲುವಿನೀ ಕಾಯಕ್ಕೆ ಸಲೇ ಚರ್ಮದಾ ಹೊದಿಕೆ**
**ಮಲ ಮೂತ್ರ ಕ್ರಿಮಿಗಳೊಳಗಿರ್ದ ದೇಹಕ್ಕೆ**
**ಕುಲವಾವುದಯ್ಯ ಸರ್ವಜ್ಞ"**

ಎಂದು ಚರ್ಮದ ದೇಹಕ್ಕೆ ಯಾವ ಕುಲವೆಂದು ಪ್ರಶ್ನಿಸುತ್ತಾ ಜಾತಿಯತೆ ಪೋಷಕರಿಗೆ ಎಚ್ಚರಿಕೆಯ ನುಡಿಗಳಾಡುತ್ತಾರೆ. ಈ ವಚನದಲ್ಲಿ ಕುಲಕುಲಗಳ ನಡುವೆ ಭಿನ್ನವೇತಕ್ಕೆ ಎಂದು ಪ್ರಶ್ನಿಸುತ್ತಾನೆ.

**ಎಲುತೊಗಲು ನರಮಾಂಸ, ಬಲಿದ ಚರ್ಮದ ಹೊದಿಕೆ**
**ಹೊಲೆ ರಕ್ತ ಶುಕ್ಲದಿಂದಾದ ದೇಹಕೆ**
**ಕುಲವಾವುದಯ್ಯ ? ಸರ್ವಜ್ಞ**

ಪ್ರತೀ ಮನುಷ್ಯರ ದೇಹ ನರಗಳು, ಮೂಳೆಗಳು, ಮಾಂಸ, ರಕ್ತ, ವೀರ್ಯ ಎಲ್ಲವನ್ನೂ ಹೊಂದಿದ ಸುಂದರವಾದ ಚರ್ಮದ ಹೊದಿಕೆಯಿಂದ ಆವೃತವಾಗಿರುತ್ತದೆ. ಪ್ರತಿಯೊಬ್ಬ ಮನುಷ್ಯರ ದೇಹ ರಚನೆ, ಅಂಗಾಂಗ ಜೋಡಣೆಯೂ ಸಹ ಒಂದೇ ತೆರನಾಗಿರುವಾಗ, ಮೇಲ್ಜಾತಿ, ಕೆಳಜಾತಿ, ಸ್ಪೃಶ್ಯರು, ಅಸ್ಪೃಶ್ಯರು, ಮೇಲು, ಕೀಳು ಎಂಬ ಭೇಧಭಾವ ಹೇಗೆ ಬರಲು ಸಾಧ್ಯ? ಅನುಮಾನವನ್ನು ವ್ಯಕ್ತಪಡಿಸುತ್ತಾರೆ.

**ಅವಯವಗಳೆಲ್ಲರಿಗೆ ಸಮವಾಗಿ ಇರುತಿರಲು**
**ಭವಿ, ಭಕ್ತ, ಶ್ವಪಚ, ಶೂದ್ರರು ಇಂತೆಂಬ**
**ಕದನವೆತ್ತಣದು? ಸರ್ವಜ್ಞ**

ದೇವರ ದೃಷ್ಟಿಯಲ್ಲಿ ಪ್ರತಿಯೊಂದು ಧರ್ಮದ ಮನುಷ್ಯರ ದೇಹವು ಒಂದೇ ಆಗಿರುತ್ತದೆ. ಎಲ್ಲಾ ಧರ್ಮದ, ಜಾತಿ ಮತಗಳ ಮನುಷ್ಯರ ದೇಹ ರಚನೆ ಒಂದೇ, ಅದರಲ್ಲಿರುವ ಅಂಗಾಂಗಗಳ ಕಾರ್ಯವು ಒಂದೇ, ಎಂದ ಮೇಲೆ ಜಾತಿ, ಮತ, ಧರ್ಮಗಳ ಆಧಾರದ ಮೇಲೆ ಮನುಷ್ಯರನ್ನು ವಿಭಾಗಿಸುವುದು ಮತ್ತು ತಾರತಮ್ಯ ಮಾಡುವುದು, ಕೀಳಾಗಿ ಕಾಣುವುದು ಎಷ್ಟರ ಮಟ್ಟಿಗೆ ನ್ಯಾಯೋಚಿತವಾದದ್ದು? ಎಂದು ಪ್ರಶ್ನಿಸುತ್ತಾರೆ.

**ಎಲುವಿಲ್ಲ ನಾಲಿಗೆಗೆ  ಬಲವಿಲ್ಲಬಡವಂಗೆ**
**ತೊಲೆ ಕಂಭವಿಲ್ಲ ಗಗನಕ್ಕೆ; ದೇವರಲಿ**
**ಕುಲಭೇದವಿಲ್ಲ! ಸರ್ವಜ್ಞ**

ಜಾತಿಪದ್ಧತಿಯು ಅವಶ್ಯವಿಲ್ಲವೆನ್ನುವ ಸಾರಾಂಶದ ತ್ರಿಪದಿ. ನಾಲಿಗೆಗೆ ಎಲುಬಿಲ್ಲ, ಬಡವನಿಗೆ ಧನಬಲ/ಜನಬಲ ಇರುವುದಿಲ್ಲ, ಆಕಾಶಕ್ಕೆ ಕಂಬಗಳೂ ಇಲ್ಲ. ಹಾಗೆಯೇ ದೇವರು ಕುಲಬೇಧವನ್ನೂ ಮಾಡುವುದಿಲ್ಲ ಎನ್ನುತ್ತಾರೆ.ಬಸವಾದಿ ಶರಣರು ಹೇಳಿದ 'ಪುರಾಣವೆಂಬುದು ಪುಂಡರ ಗೋಷ್ಠಿ' ಎಂಬ ನುಡಿಯನ್ನೂ ಸರ್ವಜ್ಞ ಕವಿ ಕೂಡ ತನ್ನ ತ್ರಿಪದಿಗಳಿಂದ ಟೀಕಿಸುತ್ತಾರೆ.

**ಓದು ವಾದಗಳೇಕೆ ಗಾದಿಯ ಮಾತೇಕೆ**
**ವೇದ ಪುರಾಣ ನಿನಗೇಕೆಲಿಂಗದಾ**
**ಹಾದಿಯರಿದವಗೆ ಸರ್ವಜ್ಞ**



ಮನುವಾದಿಗಳ ಜಾಡ್ಯದಿಂದ ಹೊರಬಂದು ವೈಚಾರಿಕತೆ, ವೈಜ್ಞಾನಿಕವಾಗಿ ಬಾಳಲು ಸಲಹೆ ನೀಡುತ್ತಾನೆ. ವೇದ ಪುರಾಣಗಳಿಗಿಂತ ಮನದಲಿ ಕಲ್ಮಶವಿಲ್ಲದೆ ಶಿವಸ್ಮರಣೆ ಮಾಡುತ್ತಾ ಪ್ರಮಾಣಿಕವಾಗಿ ಬದುಕುವುದು ಮುಖ್ಯ.

**ಓದಿ ಬೂದಿಯ ಪೂಸಿ, ತೇದು ಕಾವಿಯಹೊದೆದು**
**ಹೋದಾತ ಯೋಗಿಯೆನಬೇಡ, ಇಂದ್ರಿಯವ**
**ಕಾದಾತ ಯೋಗಿ ಸರ್ವಜ್ಞ**

ಅನೇಕ ಗ್ರಂಥಗಳನ್ನೋದಿ, ವೈರಾಗ್ಯವನ್ನು ಸೂಚಿಸುವ, ಬೂದಿಯನ್ನು ದೇಹಕ್ಕೆ ಬಳಿದುಕೊಂಡು, ಅದರಂತೆಯೇ ಕಾವಿಯ ವಸ್ತ್ರವನ್ನು ಹೊದ್ದುಕೊಂಡು, ದೇಶದಲ್ಲಿ ಸಂಚಾರ ಮಾಡುವವರಿಗೆ ಯೋಗಿಯೆನ್ನಲು ಸಾಧ್ಯವಿಲ್ಲ. ಯಾರು ತನ್ನ ಇಂದ್ರೀಯಗಳನ್ನು ಕಾಯ್ದುಕೊಂಡು, ಹತೋಟಿಯಲ್ಲಿಟ್ಟುಕೊಂಡಿರುವರೋ, ಅವರೇ ನಿಜವಾದ ಯೋಗಿಯೆನಿಸುತ್ತಾರೆ.

**ಗಂಗೆ ಗೋದಾವರಿಯು, ತುಂಗಭದ್ರೆಯು ಕೃಷ್ಣೆ**
**ಹಿಂಗದೆ ಮುಳುಗಿ ಫಲವೇನು? ತನ್ನಲಿ**
**ಲಿಂಗನೆಲಸಿರಲು! ಸರ್ವಜ್ಞ**

ಎನ್ನುವುದರಲ್ಲಿ ಮೌಢ್ಯ ತೊರೆದು ವೈಚಾರಿಕ ಪ್ರಜ್ಞೆ ಬೆಳೆಸಿಕೊಳ್ಳಲು ಪ್ರತಿಪಾದಿಸುತ್ತಾರೆ. ಮನುಷ್ಯನಿಗೆ ಆತ್ಮಜ್ಞಾನವಾಗದಿದ್ದರೆ, ಅವನು ಗಂಗಾ, ಗೋದಾವರಿ, ತುಂಗಭದ್ರಾ, ಕೃಷ್ಣೆ ಎನ್ನುವ ಪುಣ್ಯನದಿಗಳ ನೀರಿನಲ್ಲಿ ಮುಳುಗಿದರೂ ಅದರಿಂದ ಏನೂ ಪ್ರಯೋಜನವಿಲ್ಲ. ಆದರೆ ಲಿಂಗದ ಜ್ಞಾನವಿದ್ದರೆ ಮಾತ್ರ ಇವುಗಳಿಂದ ಉಪಯೋಗವಾಗುವುದು. ಇಲ್ಲದಿದ್ದರೆ ಇವುಗಳಿಂದ ಏನೂ ಉಪಯೋಗವಾಗುವುದಿಲ್ಲ ಎನ್ನುತ್ತಾರೆ.ಪುಣ್ಯಸ್ನಾನ ಮಾಡಿದ ತಕ್ಷಣ ಮಾಡಿರುವ ಪಾಪಗಳು ತೊಳೆದುಹೋಗಲು, ಪಾಪಗಳು ಮೈಯಿಗೆ ಅಂಟಿಕೊಂಡಿರುವ ದಪ್ಪ ಪದರದ ಕೆಸರಲ್ಲ. ಸ್ನಾನ ಮಾಡಿದರೆ ಹೊರಗಿನ ಮೈಯಲ್ಲಿರುವ ಕೊಳೆಯು ಮಾತ್ರ ಹೋಗುವುದು, ಆದರೆ ಆತ ಮಾಡಿರುವ ಪಾಪಗಳು ಎಂದಿಗೂ ಹಾಗೆಯೇ ಇರುತ್ತವೆ, ಅವು ತೊಳೆದುಹೋಗುವುದಿಲ್ಲ ಎನ್ನುತ್ತಾರೆ.

**ಹಿರಿದು ಕರ್ಮವ ಮಾಡಿ ಹರಿವ ನೀರೊಳುಮುಳುಗೆ**
**ಕರಗುವದೆ ಪಾಪ? ತಾ ಮುನ್ನ ಮಾಡಿದ್ದು**
**ಎರೆಯ ಕಲ್ಲೆಂಟೆಯೇ? ಸರ್ವಜ್ಞ**

ಪಾಪ ಕರ್ಮವನ್ನು ಮಾಡಿ ಹರಿಯುವ (ಹೊಳೆಯ) ನೀರೊಳಗೆ ಮುಳುಗಿ ಎದ್ದರೆ ಪಾಪವು ಕರಗಿ ಹೋಗುವುದೇ? (ಆ ರೀತಿ ಕರಗಿ ಹೋಗಲು ಅದು,

ಅಂದರೆ) ಮೊದಲು ಮಾಡಿದ ಪಾಪವು ಎರೆಮಣ್ಣಿನ ಮುದ್ದೆಯೇ? ಕರಗಿ ಹೋಗಲಿಕ್ಕೆ ಎನ್ನುತ್ತಾರೆ.

**ಉತ್ತಮರು ಪಾಲ್ಗಡಲೊಳೆತ್ತಿರಲು ಜನ್ಮವನು**
**ಉತ್ತಮರಧಮರೆನಬೇಡ, ಹೊಲೆಯಿಲ್ಲ**
**ದುತ್ತಮರೆಲ್ಲಿ? ಸರ್ವಜ್ಞ**

ನಾವು ಶ್ರೇಷ್ಠ ಜಾತಿಯವರು, ಉತ್ತಮರು ಎಂದು ಹೇಳಿಕೊಳ್ಳುವ ಜನರು ಕ್ಷೀರಸಮುದ್ರದಲ್ಲಿ ಜನ್ಮ ತಾಳಿದ್ದಾರೆಯೇ? ಇಲ್ಲ ಅಲ್ಲವೇ. ಮನುಷ್ಯರಲ್ಲಿ ಶ್ರೇಷ್ಠರು, ಕನಿಷ್ಠರು ಎಂದು ಭೇದ ಭಾವ ಮಾಡಬಾರದು, ಏಕೆಂದರೆ, ಅವರು ಹುಟ್ಟುವುದು ಹೊಲಸು ತುಂಬಿದ ದೇಹದಲ್ಲಿಯೇ ಮತ್ತು ಹುಟ್ಟಿದ ಮೇಲೆಯೂ ಅವರ ದೇಹದಲ್ಲಿಯೂ ಸಹ ಹೊಲಸು ತುಂಬಿರುತ್ತದೆ. ದೇಹದಲ್ಲಿ ಹೊಲಸು ಇರದ ವ್ಯಕ್ತಿ ಈ ಭೂಮಿಯ ಮೇಲೆ ಇರಲು ಸಾಧ್ಯವಿಲ್ಲ ಎಂದು ಬುದ್ಧಿವಾದ ಹೇಳುತ್ತಾರೆ.

**ವೇದ ಮಂತ್ರವನಂದು ಹೇಳಿ ಕಾದ ತುಪ್ಪದಿ ತೊಳೆಯೆ**
**ಹಾದರದ ಪಾಪ ಹೋಯ್ತೆಂಬ ಹಾರುವನ**
**ಮೋದದೇ ವಿಧಿಯು? ಸರ್ವಜ್ಞ**

ವೇದಾದಿ ಮಂತ್ರಗಳ ಪಠಣವನ್ನು ಮಾಡಿ, ಬಿಸಿಮಾಡಿ ಕರಗಿಸಿದ ತುಪ್ಪವನ್ನು ಹೋಮಕುಂಡಕ್ಕೆ ಸುರಿದು, ಅದರಿಂದ ಮಾಡಿದ ದುಷ್ಕೃತ್ಯ, ದುರಾಚಾರದ ಪಾಪಗಳೆಲ್ಲವೂ ಹೋಯಿತೆಂದು ಹೇಳುವಂತಹ ಜನರನ್ನು, ದೈವವು ಶಿಕ್ಷಿಸದೇ ಬಿಡಲು ಸಾಧ್ಯವೇ? ಎನ್ನುತ್ತಾರೆ.

**ವೇದಶಾಸ್ತ್ರಾಗಮವನೋದಿದೊಡೆ ಫಲವೇನು?**
**ವೇದಿಸುವ ಚಿತ್ತ ಸಮರಸವಿಲ್ಲದೊಡೆ**
**ಬೂದಿಯಲಿ ಹೋಮ ಸರ್ವಜ್ಞ**

ದೃಢವಾದ ಚಿತ್ತವು, ದೇವರಲ್ಲಿ ಭಕ್ತಿಯು, ಸರ್ವರೊಡನೆಯು ಸಮರಸದಿಂದ ಬಾಳುವ ಗುಣವಿಲ್ಲದಿದ್ದರೆ, ಅವರು ವೇದ, ಶಾಸ್ತ್ರ, ಆಗಮಗಳನ್ನು ಅಧ್ಯಯನ ಮಾಡಿದ್ದರೂ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅದೆಲ್ಲವೂ ಬೂದಿಯಲ್ಲಿ ಹೋಮ ಮಾಡಿದಂತೆ ವ್ಯರ್ಥವಾಗುವುದು.

**ನಿತ್ಯ ನೀರ್ಮುಳುಗುವನು ಹತ್ತಿದಡೆಸ್ವರ್ಗವನು**
**ಎತ್ತಿ ಜನ್ಮವನು ಜಲದೊಳಿಪ್ಪಾ ಕಪ್ಪೆ**
**ಹತ್ತದೇಕೆಂದ? ಸರ್ವಜ್ಞ**

ದಿನವೂ ನೀರಿನಲ್ಲಿ ಮುಳುಗೆದ್ದು, ನಿತ್ಯ ನೇಮಗಳನ್ನು ಮಾಡಿದವರೆಲ್ಲಾ ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ ಎಂದ ಮೇಲೆ, ನೀರಿನಲ್ಲೇ ಜನ್ಮ ಪಡೆದು,



ನೀರೊಳಗೇ ಬೆಳೆದು, ನೀರಿನಲ್ಲೇ ಬದುಕುತ್ತಿರುವ ಕಪ್ಪೆಗಳು ಸ್ವರ್ಗಕ್ಕೆ ಹೋಗಬಾರದೇಕೆ? ಎಂದು ಪ್ರಶ್ನಿಸುತ್ತಾರೆ.

**ಹಾಳುಗುಡಿಯಲಿ ಕುಳಿತು ಜಾಳು ಮಾತುಗಳನಾಡಿ**
**ಮೇಳಗಳ ಬಿಡದೆ ಶಿವನೆಂಬ ಶಿವಯೋಗಿ**
**ಬಾಳುವನೆ ಹೇಳು? ಸರ್ವಜ್ಞ**

ಯಾವುದಾದರೊಂದು ಪಾಳು ಬಿದ್ದಿರುವ ಗುಡಿಯಲ್ಲಿ ಕುಳಿತುಕೊಂಡು, ಕೆಲಸಕ್ಕೆ ಬಾರದ ಪೊಳ್ಳು ಮಾತುಗಳನ್ನು ಆಡುತ್ತಾ, ಜನರ ಸಹವಾಸವನ್ನು ಬಿಡದೆ, ಯಾವುದೇ ಕಾಯಕವನ್ನು ಮಾಡದೆ, ದೇವರ ಧ್ಯಾನವನ್ನು ಮಾಡಿ, ಮುಕ್ತಿಯನ್ನು ನೀಡೆಂದು ಶಿವ ಯೋಗಿಯು ಬೇಡಿಕೊಂಡರೆ, ಆ ಶಿವಯೋಗಿಯು ಮುಕ್ತಿಪಡೆಯಲು ಸಾಧ್ಯವಿಲ್ಲವೆನ್ನುತ್ತಾರೆ.

**ಮೇಲು ಕೀಳೆನಬೇಡ, ಶೀಲವನು ಬಿಡಬೇಡ**
**ಕಾಲವಕಾಲವೆನಬೇಡ, ಧರ್ಮದಾ**
**ಕೀಲುಬೇರೆಂದ ಸರ್ವಜ್ಞ**

ದಾನವನು ಮಾಡುವಾಗ ಮೇಲು ಜಾತಿ, ಕೀಳುಜಾತಿ ಎಂದು ತಾರತಮ್ಯ ಮಾಡಬಾರದು, ದಾನ ಕೊಡುವ ವಸ್ತು ಹೆಚ್ಚಿನ ಬೆಲೆಯದು ಅಥವಾ ಕಡಿಮೆ ಬೆಲೆಯದು ಎಂದು ಯೋಚನೆ ಮಾಡಬಾರದು, ದಾನ ಮಾಡುವಾಗ ಒಳ್ಳೆಯ ನಡತೆಯನ್ನು ಮರೆಯಬಾರದು, ದಾನ ಮಾಡುವ ಕಾಲವು ಯೋಗ್ಯವೋ, ಅಲ್ಲವೋ ಎಂದು ಚಿಂತಿಸಬಾರದು. ಇವೆಲ್ಲವನ್ನು ಯೋಚಿಸದೆ ದಾನವನ್ನು ಮಾಡಬೇಕು. ಧರ್ಮದ ಮರ್ಮವೇ ಬೇರೆ ರೀತಿಯದ್ದಾಗಿರುತ್ತದೆ ಎನ್ನುತ್ತಾರೆ.

**ಮುಟ್ಟಿ ಶ್ರೀಗಂಧವನು ಇಟ್ಟು ತಾನೊಸಲೊಳಗೆ**
**ನೆಟ್ಟನೆಯ ಸ್ವರ್ಗಪಡೆವಡೆ,ಸಾಣೆಕಲ್**
**ಪಟ್ಟಕೇಡೇನು? ಸರ್ವಜ್ಞ**

ಸಾಣೆಯ ಕಲ್ಲಿನಿಂದ ಗಂಧವನ್ನು ತೇದು, ಅದನ್ನು ಹಚ್ಚಿಕೊಳ್ಳುವುದರಿಂದ, ಆ ಮನುಷ್ಯನು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾನೆ ಎಂದಾದರೆ, ದಿನವೂ ಗಂಧವನ್ನು ಮೆತ್ತಿಕೊಳ್ಳುವ, ಗಂಧದಿಂದ ಉಜ್ಜಿಸಿಕೊಳ್ಳುವ ಆ ಸಾಣೆಯಕಲ್ಲು ಸ್ವರ್ಗಕ್ಕೆ ಯಾಕೆ ಹೋಗಬಾರದು? ಅಂದರೆ, ನಾವು ಮಾಡುವ ಕ್ರಿಯೆ, ಪುಣ್ಯಕಾರ್ಯಗಳು ಮಾತ್ರ ನಮಗೆ ಮುಕ್ತಿಯನ್ನು ನೀಡುತ್ತವೆ ಹೊರತು, ತೋರಿಕೆಯ ಆಚರಣೆಗಳಲ್ಲ ಎನ್ನುತ್ತಾರೆ.

**ತೊರೆಯಬಲ್ಲಡೆ ಧರ್ಮ, ಒರತೆಯಾತೊರೆಯಂತೆ**
**ತೊರೆಯಲರಿಯದೆ ತೊರೆದಡಾ ತೊರೆತುಂಬಿ**
**ಹರಿದು ಬಂದಂತೆ! ಸರ್ವಜ್ಞ**

ಧರ್ಮವನ್ನು ಆಚರಿಸುವಾಗ ಧರ್ಮದಲ್ಲಿ ಹೇಳಿರುವುದರಲ್ಲಿ ಯಾವುದನ್ನು ಬಿಡಬೇಕು, ಯಾವುದನ್ನು ಮಾಡಬೇಕೆಂದು ತಿಳಿದುಕೊಂಡು, ಉಪಯೋಗವಿಲ್ಲದ್ದನ್ನು ಬಿಟ್ಟು, ಸರ್ವರಿಗೂ ಉಪಯುಕ್ತವಾದುದನ್ನು ಮಾಡುತ್ತಾ ಹೋದರೆ, ಅದು ಒರತೆಯೊಳಗಿನ ಶುದ್ಧವಾದ, ಯೋಗ್ಯವಾದ ನೀರಿನಂತೆ ಸರ್ವರಿಗೂ ಹಿತವನ್ನುಂಟು ಮಾಡುತ್ತದೆ. ಆದರೆ, ಧರ್ಮದ ಮರ್ಮವನ್ನು ತಿಳಿದುಕೊಳ್ಳದೆ, ಯಾವುದನ್ನು ಬಿಟ್ಟರೆ, ಯಾವುದನ್ನು ಅನುಸರಿಸಿದರೆ ಸಮಸ್ಯೆಗಳಾಗುತ್ತದೆ ಎಂದು ಯೋಚಿಸದೆ ಅನುಸರಿಸಿದರೆ, ಅದು ನದಿಯಲ್ಲಿ ಪ್ರವಾಹ ಉಕ್ಕಿ ಹರಿದಂತೆ, ಧರ್ಮವನ್ನು, ಪಾಲಿಸುವವರನ್ನೂ ನಾಶ ಮಾಡುತ್ತದೆ.

**ಸುಟ್ಟು ಬೂದಿಯ ತಂದು, ದಟ್ಟವಾಗಿಯೇ ಬಡಿದು**
**ಶ್ರೇಷ್ಠ ಸ್ವರ್ಗವನು ಅಡರುವಡೆ, ಕತ್ತೆ ತಾ**
**ಕೆಟ್ಟ ಕೇಡೇನು ಸರ್ವಜ್ಞ**

ಯಜ್ಞ, ಹೋಮ, ಹವನಾದಿಗಳನ್ನು ಮಾಡಿ ಅದರಲ್ಲಿ ಸುಟ್ಟು, ಉಳಿದ ಬೂದಿಯನ್ನು ತಂದು ಮೈಗೆಲ್ಲಾ ದಪ್ಪನಾಗಿ ಹಚ್ಚಿಕೊಂಡ ತಕ್ಷಣ ಸ್ವರ್ಗವು ಪ್ರಾಪ್ತಿಯಾಗುವ ಹಾಗಿದ್ದಿದ್ದರೆ, ಯಾವಾಗಲೂ ಬೂದಿಯಲ್ಲಿಯೇ ಬಿದ್ದು ಹೊರಳಾಡುವ ಕತ್ತೆಯು, ಎಲ್ಲರಿಗಿಂತ ಮೊದಲೇ ಸ್ವರ್ಗಕ್ಕೆ ಹೋಗಬಹುದೇ? ಎಂದು ಪ್ರಶ್ನಿಸುತ್ತಾರೆ.

**ಎತ್ತು ಗಾಣವ ಹೊತ್ತು ಸುತ್ತಿ ಬಂದೆಡೆಏನು**
**ಚಿತ್ತದಲಿ ಶಿವನ ನೆನೆಯದೊಡೆ ದೇಗುಲವ**
**ಸುತ್ತಿ ಫಲವೇನು ಸರ್ವಜ್ಞ**

ಕಾಟಾಚಾರದ –ಮನಸ್ಸಿಲ್ಲದ ಕಾರ್ಯಗಳಿಂದ ಏನೂಫಲವಿಲ್ಲ. ಎಣ್ಣೆ ತೆಗೆಯಲು ಗಾಣಿಗ ಎತ್ತನ್ನು ಗಾಣದಸುತ್ತಸುತ್ತಿಸುತ್ತಾನೆ. ಗಾಣದಲ್ಲಿ ಎಣ್ಣೆಯಬೀಜಗಳು ಇದ್ದಾಗಮಾತ್ರ ಎಣ್ಣೆ ಬರುತ್ತದೆ; ಅದರ ಅರಿವಿಲ್ಲದ ಎತ್ತು ಗಾಣದಲ್ಲಿ ಎಣ್ಣೆ ಕಾಳುಗಳು ಇಲ್ಲದಾಗ ಸುಮ್ಮನೆ ಸುತ್ತಿದರೆ ಬರುವ ಭಾಗ್ಯವೇನು? ಬರೀ ಶ್ರಮವಷ್ಟೆ. ಭಕ್ತಿಯಿಲ್ಲದೆ ಪ್ರತಿದಿನ ಮೂರು ಬಾರಿ ಹತ್ತಾರು ದೇವಸ್ಥಾನಗಳನ್ನು ಸುತ್ತಿದರೆ ದೇವರು ಒಲಿಯಲು ಸಾಧ್ಯವೇ?

**ಮೂರೆಳೆಯನುಟ್ಟಾತಾ ಹಾರುವಡೆ ಸ್ವರ್ಗಕ್ಕೆ**
**ನೂರೆಂಟು ಎಳೆಯ ಕವುದಿಯನು ಹೊದ್ದಾತ**
**ಹಾರನೇಕಯ್ಯ ಸರ್ವಜ್ಞ**

ಆಚಾರಕ್ಕಿಂತ ವಿಚಾರ ಮುಖ್ಯ ಎಂದು ಈ ವಚನದಲ್ಲಿ ತಿಳಿಸುತ್ತಾರೆ. ಮೂರೆಳೆಯ (ಜನಿವಾರವನ್ನು) ಧರಿಸಿಕೊಂಡವನು ಸ್ವರ್ಗಕ್ಕೆ ಹೋಗಬಲ್ಲವನಾದರೆ ನೂರಾ ಎಂಟು ಎಳೆಗಳುಳ್ಳಂಥ ಕವುದಿಯನ್ನು ಹೊದ್ದುಕೊಳ್ಳುವಂಥವನು ಸ್ವರ್ಗಕ್ಕೇಕೆ



ಹೋಗಲಾರ? ಎಂದು ಪ್ರಶ್ನಿಸುತ್ತಾರೆ. ಇಂತಹ ನೂರಾರು ವಚನಗಳಲ್ಲಿ ಸರ್ವಜ್ಞ ಕವಿಯು ವೈಚಾರಿಕ ಪ್ರಜ್ಞೆಯಿಂದ ಜನರನ್ನು ಎಚ್ಚರಿಸುವ ಕೆಲಸ ಮಾಡುತ್ತಾರೆ.

ಹೀಗೆ ಸರ್ವಜ್ಞ ಕವಿಯ ವಚನಗಳಲ್ಲಿನ ಆದರ್ಶ ಮತ್ತು ತತ್ವಗಳು ಸಮಾಜದಲ್ಲಿರುವ ಅನಾಚಾರಗಳನ್ನು ಸರಿಪಡಿಸಲು ಕಾರ್ಯನಿರ್ವಹಿಸುತ್ತವೆ. ಉತ್ತಮ ಸಮಾಜವನ್ನು ಗಟ್ಟಿಗೊಳಿಸುವಂಥ ಸಾರಾಂಶಗಳು ಪ್ರತಿಬಿಂಬಿತಗೊಂಡಿವೆ. ಪ್ರತಿ ತ್ರಿಪದಿಯೂ ವೈಜ್ಞಾನಿಕವಾದ, ವೈಚಾರಿಕವಾದ ವಿಮರ್ಶೆಯನ್ನು ಹೊಂದಿದ್ದು, ಇವುಗಳಲ್ಲಿ ಅಡಗಿರುವ ತತ್ವಗಳು ಸರ್ವಕಾಲಕ್ಕೂ ಅನ್ವಯಿಸುವುದಾಗಿ ಪುರಸ್ಕೃತವಾಗಿವೆ. ಜಾನಪದ ಸೊಗಡು, ಸರಳ ನಿರೂಪಣೆ ಮತ್ತು ಮಾನವತೆಯ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುವ ತ್ರಿಪದಿ ಸಾಹಿತ್ಯ ಸಂಪತ್ತಿನ ಮೂಲಕ ಕನ್ನಡ ಅಕ್ಷರ ಲೋಕವನ್ನು ಶ್ರೀಮಂತಗೊಳಿಸಿದ ಶ್ರೇಯಸ್ಸು ಸರ್ವಜ್ಞ ಕವಿಗೆ ಸಲ್ಲುತ್ತದೆ. ಒಟ್ಟಾರೆಯಾಗಿ ಈ ಲೋಕದಲ್ಲಿ ಕಂಡ ಸಿಹಿ–ಕಹಿ ಸತ್ಯವನ್ನು ಅವನು ತನ್ನ ತ್ರಿಪದಿಗಳಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸಿ, ಕಾಲಜ್ಞಾನಿಯಾಗಿ ಸರ್ವಜ್ಞ ಮನುಕುಲ ಚಿರಕಾಲ ಸ್ಮರಿಸುವ ದಾರ್ಶನಿಕ ವ್ಯಕ್ತಿಯಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು :**


1) ಎಲ್. ಬಸವರಾಜು (ಸಂ): **ಸರ್ವಜ್ಞನ ವಚನಗಳು,** ಗೀತಾ ಬುಕ್‌ಹೌಸ್, ಮೈಸೂರು, 2002.
2) ಎಂ.ವಿ.ಸೀತರಾಮಯ್ಯ (ಸಂ): **ಸರ್ವಜ್ಞ ವಚನಗಳು,** ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1982.
3) ಎಂ.ಮರಿಯಪ್ಪ ಭಟ್ಟ(ಸಂ): **ಸರ್ವಜ್ಞ ವಚನ ಸಂಗ್ರಹ,** ಸಾಹಿತ್ಯ ಅಕಾಡೆಮಿ, ಬೆಂಗಳೂರು, 1971.
4) ಚೆನ್ನಪ್ಪ ಉತ್ತಂಗಿ(ಸಂ) : **ಸರ್ವಜ್ಞನ ವಚನಗಳು,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2005.
5) ರಂ.ಶ್ರೀ.ಮುಗಳಿ : **ಕನ್ನಡ ಸಾಹಿತ್ಯ ಚರಿತ್ರೆ,** ಗೀತಾ ಬುಕ್‌ಹೌಸ್, ಮೈಸೂರು, 1990.
6) ಸಿ.ಪಿ.ನಾಗರಾಜ : **ಸರ್ವಜ್ಞನ ವಚನಗಳ ಓದು,** ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು, 2024.
7) ಜ.ಹೊ.ನಾರಾಯಣಸ್ವಾಮಿ: **ಸಾರ್ಥಕತೆಯ ಸಾಧಕ ಸರ್ವಜ್ಞ,** ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, 2019.
8) ಜಿ.ಎಸ್.ಶಿವರುದ್ರಪ್ಪ(ಸಂ): **ಸರ್ವಜ್ಞ ಒಂದು ಸಮೀಕ್ಷೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1975.